ಇನ್ನೊಂದು ಬೇರೆ ಆರೋಗ್ಯ ಸಮಸ್ಯೆಯಿಂದ ಬರುವಂಥದ್ದು (aquired heart disease). ಇದಕ್ಕೆ ಕಾರಣ ಬದಲಾದ ಜೀವನಶೈಲಿ, ಆಹಾರ ಪದ್ಧತಿ, ಒತ್ತಡ, ಬೊಜ್ಜು, ಧೂಮಪಾನ, ಮದ್ಯಪಾನ ಮುಂತಾದವು.

◆ **ಹೃದಯದ ಕೀಹೋಲ್ ಸರ್ಜರಿ ಬಗ್ಗೆ ಮಾಹಿತಿ ನೀಡಿ...**


ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರಿಗೆ ಕೀಹೋಲ್ ಸರ್ಜರಿ' ಮಾಡುತ್ತೇವೆ. ಇದನ್ನು Right Vertical Infra Axillary Thoracotomy ವಿಧಾನದಿಂದ ಮಾಡುವುದು. ಈ ಸರ್ಜರಿ ಕನಿಷ್ಠ ಆಕ್ರಮಣಕಾರಿ ಶಸ್ತ್ರಚಿಕಿತ್ಸೆ ಆಗಿರುತ್ತದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಎದೆಯ ಮೂಳೆಯನ್ನು (ರಿಬ್ಸ್) ಸಂಪೂರ್ಣವಾಗಿ ತೆರೆಯದೆಯೇ ಎದೆಯ ಬಲಭಾಗದಲ್ಲಿ ಸಣ್ಣ ಛೇದನಗಳ ಮೂಲಕ ಮಾಡಲಾಗುತ್ತದೆ. ಸಾಮಾನ್ಯವಾಗಿ ಕವಾಟ ಬದಲಿ ಅಥವಾ ಹಾನಿಗೊಳಗಾದ ಹೃದಯ ಕವಾಟಗಳನ್ನು ಸರಿಪಡಿಸಲು ಈ ಸರ್ಜರಿ ಮಾಡಲಾಗುತ್ತದೆ. ಹೃದಯದ ಕುಹರಗಳ (ventricals) ನಡುವೆ ರಂಧ್ರ ಇದ್ದರೆ ರಕ್ತವನ್ನು ಪಂಪ್ ಮಾಡಿದಾಗ ಎಡಭಾಗದಿಂದ ಬಲಭಾಗಕ್ಕೆ ರಕ್ತ ವೇಗವಾಗಿ ಹರಿಯುತ್ತದೆ. ಇದರಿಂದ ಮಹಾಪಧಮನಿಯ ಮೇಲೆ ಒತ್ತಡ ಜಾಸ್ತಿ ಬೀಳುತ್ತದೆ. ಇದರಿಂದ ಹೃದಯಾಘಾತ ಆಗುವ ಸಾಧ್ಯತೆ ಇದೆ. ಹೀಗಾಗುವ ಮುನ್ನ ಸರ್ಜರಿ ಮಾಡಿಸಬೇಕು. ಮನೆಯಲ್ಲಿ ಯಾರಿಗಾದರೂ ಹೃದಯಾಘಾತವಾಗಿದ್ದ ಹಿನ್ನೆಲೆ ಇದ್ದರೆ ಉಳಿದವರು ಟ್ರೆಡ್ ಮಿಲ್ ಟೆಸ್ಟ್ ಮಾಡಿಸಿಕೊಳ್ಳಬೇಕು. 40–45 ವರ್ಷ ಆದ ಬಳಿಕ ನಿಯಮಿತವಾಗಿ ಇಸಿಜಿ, ಇಕೊ ಟೆಸ್ಟ್ ಮಾಡಿಸಿಕೊಳ್ಳಬೇಕು. ಇದರಲ್ಲಿ ಏನಾದರೂ ಸಮಸ್ಯೆ ಕಂಡುಬಂದಲ್ಲಿ ಸಿ.ಟಿ. ಆ್ಯಂಜಿಯೊಗ್ರಾಮ್ ಮಾಡಿಸಿಕೊಳ್ಳುವುದು ಅನಿವಾರ್ಯ.

◆ **ಕೀಹೋಲ್ ಸರ್ಜರಿ ಅಥವಾ ಮಿನಿಮಲಿ ಇನ್‌ವೇಸಿವ್ ಸರ್ಜರಿ ಯಾವ ಸಂದರ್ಭಗಳಲ್ಲಿ ಸೂಕ್ತ?**

ಸಾಮಾನ್ಯವಾಗಿ ಹೃದಯದ ಎರಡು ಹೃತ್ಕರ್ಣಗಳ ನಡುವೆ ರಂಧ್ರ (Atrial Septal Defect–ASD) ಇರುವವರಿಗೆ ಈ ವಿಧಾನದಿಂದ ಸರ್ಜರಿ ಮಾಡುತ್ತೇವೆ. ರಂಧ್ರದ ಜೊತೆಗೆ ಹೃದಯದ ರಕ್ತನಾಳಗಳ ಅದಲು ಬದಲು (ASD with PAPVC) ಮಾಡಬೇಕಾದ ಸಂದರ್ಭದಲ್ಲಿ, ಹೃದಯದ ಕವಾಟಗಳು ಹಾನಿಗೊಳಗಾಗಿದ್ದು ಇವುಗಳನ್ನು ಬದಲಾಯಿಸುವ (Mitral Value Replacement–MVR) ಪ್ರಮೇಯ ಬಂದಾಗ ಹಾಗೂ ಬಲಹೃತ್ಕರ್ಣದಲ್ಲಿ ದುರ್ಮಾಂಸ ಬೆಳೆದಿದ್ದರೆ ಅದನ್ನು ತೆಗೆಯುವ (Right Atrial Myxoma) ಸಲುವಾಗಿ ಕೀಹೋಲ್ ಸರ್ಜರಿ ಮಾಡುತ್ತೇವೆ.

◆ **ಈ ಸರ್ಜರಿಯ ಕಾರ್ಯವಿಧಾನವನ್ನು (ಪ್ರೊಸೀಜರ್) ವಿವರಿಸುವಿರಾ?**

ಕಂಕುಳದ ಬಲಭಾಗದಲ್ಲಿ ಸಣ್ಣ ಎಂದರೆ ಸುಮಾರು 3–5 ಸೆ.ಮೀ. ಕೊಯ್ತ ಮಾಡ್ತೀವಿ.



ಅಡ್ಮಿಟ್ ಆದ ದಿನ ವಿವಿಧ ರೀತಿಯ ಪರೀಕ್ಷೆಗಳನ್ನು ಮಾಡಲಾಗುತ್ತದೆ. ಒಂದು ದಿನ ಪರಿಶೀಲನೆಯಲ್ಲಿ ಇಡುತ್ತೀವಿ ರೋಗಿಯನ್ನು. ಮರುದಿನವೇ ಸರ್ಜರಿ ಮಾಡಲಾಗುತ್ತದೆ. ಮತ್ತೆ ಎರಡು ದಿನದಲ್ಲಿ ರೋಗಿಯನ್ನು ತಪಾಸಣೆ ಮಾಡಿ ಮನೆಗೆ ಕಳಿಸುತ್ತೇವೆ.

ಈ ಸರ್ಜರಿಯಲ್ಲಿ ರಕ್ತಸ್ರಾವ ಬಹಳ ಕಡಿಮೆ ಇರುತ್ತದೆ. ಆದರೂ ಶಸ್ತ್ರಚಿಕಿತ್ಸೆಗೆ ಮುನ್ನ ನಾಲ್ಕು ಯುನಿಟ್ ರಕ್ತ ರೆಡಿ ಇಟ್ಟರ್ತೀವಿ. 10 ರೋಗಿಗಳಲ್ಲಿ ಒಬ್ಬರಿಗೆ ರಕ್ತ ಕೊಡುವ ಪ್ರಸಂಗ ಬರುತ್ತದೆ ಅಷ್ಟೆ. ಈ ಬಗೆಯ ಸರ್ಜರಿಯಲ್ಲಿ ನೋವು ಕಡಿಮೆ, ರಕ್ತಸ್ರಾವ ಕಡಿಮೆ, ಐಸಿಯು ವಾಸ ಹಾಗೂ ಒಟ್ಟಾರೆ ಆಸ್ಪತ್ರೆ ವಾಸ ಕಡಿಮೆ ಇರುತ್ತದೆ, ಸಣ್ಣ ಗಾಯ ಮಾಡುವುದರಿಂದ ಗಾಯದ ಕಲೆ ಚಿಕ್ಕದಾಗಿರುತ್ತದೆ. ಇದು ಬೇಗ ವಾಸಿಯಾಗುತ್ತದೆ. ಇದರಿಂದ ಸೋಂಕಿನ ಅಪಾಯವೂ ಕಡಿಮೆ.

◆ **ಹೆಚ್ಚು ಸರ್ಜರಿಗಳನ್ನು ಮಕ್ಕಳಿಗೇ ಮಾಡಿದ್ದೇವೆ ಎಂದಿರಿ. ಇದಕ್ಕೆ ಕಾರಣ ಆನುವಂಶೀಯವೇ?**

ಮಿನಿಮಲಿ ಇನ್‌ವೇಸಿವ್ ಸರ್ಜರಿಯನ್ನು ಸಾಮಾನ್ಯವಾಗಿ ಮಕ್ಕಳಿಗೇ ಮಾಡುತ್ತೇವೆ. ಮಕ್ಕಳಲ್ಲಿ ಜನ್ಮಜಾತ ಸಮಸ್ಯೆ ಹೆಚ್ಚಿರುತ್ತದೆ. ಇದಕ್ಕೆ ಸರ್ಜರಿ ಒಂದೇ ದಾರಿ. 6–10 ವರ್ಷದ ಮಕ್ಕಳು, ಶಾಲೆಯಲ್ಲಿ ಇದ್ದಾಗ ಹೃದಯ ಸಮಸ್ಯೆ ಕಾಡುತ್ತದೆ. ಹೃದಯ ಸಾಮಾನ್ಯ ಗಾತ್ರಕ್ಕಿಂತಲೂ ದೊಡ್ಡದಾಗಿರುತ್ತದೆ. ಹೆಚ್ಚಿನ ಪ್ರಕರಣಗಳಲ್ಲಿ ಮಕ್ಕಳಿಗೆ ಎರಡು ಹೃತ್ಕರ್ಣಗಳ ನಡುವೆ ರಂಧ್ರ (ಎಎಸ್‌ಡಿ) ಇರುತ್ತದೆ. ಇಂಥ ಮಕ್ಕಳಿಗೆ ಹೃದಯದ ಸಮಸ್ಯೆ ಬಂದರೆ ಮುಂದೆ ಅಪಾಯ ಇದೆ ಎಂದೇ ಅರ್ಥ. ಶಸ್ತ್ರಚಿಕಿತ್ಸೆ ಮಾಡಬೇಕಾದ ಮಕ್ಕಳು ಕನಿಷ್ಠ 18–20 ಕೆಜಿ ತೂಕ ಇರಬೇಕು.

◆ **ಜಯದೇವದಲ್ಲಿ ಎಷ್ಟು ರೋಗಿಗಳು ಕೀಹೋಲ್ ಸರ್ಜರಿಯಲ್ಲಿ ಗುಣಮುಖರಾಗಿದ್ದಾರೆ? ಯಶಸ್ಸಿನ ಪ್ರಮಾಣ ಎಷ್ಟು?**

ಇದುವರೆಗೆ ಸುಮಾರು 600 ಕೀಹೋಲ್ ಸರ್ಜರಿಗಳನ್ನು ಈ ಆಸ್ಪತ್ರೆಯಲ್ಲಿ ಮಾಡಿದ್ದೇವೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು ಬಹುತೇಕ ಎಲ್ಲರೂ ಹುಷಾರಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಈ ಶಸ್ತ್ರಚಿಕಿತ್ಸೆ ನಡೆಸಿ ಒಂದು ತಿಂಗಳ ಬಳಿಕ ಮತ್ತೆ ಫಾಲೊಅಪ್ ಚೆಕ್‌ಅಪ್‌ಗೆ ಬಂದಾಗ ಸಂಪೂರ್ಣ ಗುಣಮುಖರಾಗಿಯೇ ನಾವು ರೋಗಿಗಳನ್ನು ನೋಡುತ್ತೇವೆ, ಹೃದಯಕ್ಕೆ ಕೀಹೋಲ್ ಸರ್ಜರಿಯನ್ನು ಸಾಮಾನ್ಯವಾಗಿ 70 ಕೆಜಿ ಒಳಗೆ ಇರುವವರಿಗೇ ಮಾಡುತ್ತೇವೆ. ಅಪರೂಪದ ಪ್ರಕರಣಗಳಲ್ಲಿ ವಿಶೇಷ ತಂತ್ರಜ್ಞಾನ ಬಳಸಿ 95 ಕೆಜಿ ಇದ್ದ ರೋಗಿಗೂ ಶಸ್ತ್ರಚಿಕಿತ್ಸೆ ಮಾಡಿದ ಉದಾಹರಣೆ ಇದೆ. ಆದರೂ ಇವರು ಗುಣಮುಖರಾಗಿ ಹೋಗಿದ್ದಾರೆ. ಗುಣಮುಖರಾದ ಬಳಿಕ ಮೂರು ವಾರಗಳಲ್ಲಿ ವೃತ್ತಿನಿರತರು ಉದ್ಯೋಗಕ್ಕೆ ತೆರಳಬಹುದು. ಶಾಲಾ ಮಕ್ಕಳು ಒಂದು ತಿಂಗಳ ಬಳಿಕ ಎಂದಿನಂತೆ ಶಾಲೆಗೆ ಹೋಗಬಹುದು.

◆ **ಕರ್ನಾಟಕ ಅಲ್ಲದೆ ಬೇರೆ ರಾಜ್ಯದ ರೋಗಿಗಳಿಗೂ ಸರ್ಜರಿ ಮಾಡಿದ್ದೀರಾ?**

ಹೌದು. ರಾಜಸ್ಥಾನ, ತಮಿಳುನಾಡು, ಪಶ್ಚಿಮ ಬಂಗಾಳ, ಒಡಿಶಾಗಳಿಂದ ಬಂದ ರೋಗಿಗಳಿಗೂ ಮಾಡಿದ್ದೇವೆ. ಅಲ್ಲದೆ ಬಾಂಗ್ಲಾದೇಶದ 9 ವರ್ಷದ ಹುಡುಗನಿಗೆ, ನೇಪಾಳದ 10 ವರ್ಷದ ಹುಡುಗಿಗೆ ಕೀಹೋಲ್ ಸರ್ಜರಿ ಮಾಡಲಾಗಿದೆ.

◆ **ಕೀಹೋಲ್ ಸರ್ಜರಿಗಳನ್ನು ಯಶಸ್ವಿಯಾಗಿ ಪೂರೈಸಿದ್ದೀರಿ. ನಿಮ್ಮ ವೈದ್ಯ ಬದುಕಿನ ಸಾರ್ಥಕ್ಯ ಕ್ಷಣ ಎನಿಸಿದ್ದು ಯಾವಾಗ?**

ಈ ಎಂಐಸಿಎಸ್ (Minimally Invasive Cardiac Surgery) ವಿಧಾನದಿಂದ ಶಸ್ತ್ರಚಿಕಿತ್ಸೆ ಮಾಡಿರುವ ಸುಮಾರು 600 ರೋಗಿಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವರು (ಸುಮಾರು 350 ರೋಗಿಗಳು) 5ರಿಂದ 18 ವರ್ಷದ ಮಕ್ಕಳು. ಮಕ್ಕಳಿಗೆ ಹೃದಯ ರೋಗವಿದೆಯೆಂದು ಕೇಳಿದ ತಕ್ಷಣ ಪೋಷಕರೂ ಕುಸಿದುಹೋಗುತ್ತಾರೆ. ಶಸ್ತ್ರಚಿಕಿತ್ಸೆಗಾಗಿ ಬರುವಾಗ ಅವರು ಬಹಳ ಆತಂಕದಲ್ಲಿರುತ್ತಾರೆ. ಕೀಹೋಲ್ ಸರ್ಜರಿಯ ಮೂಲಕ ಗುಣಮುಖರಾದಾಗ, ‘ಡಾಕ್ಟರೆ, ನಾನು ಮನೆಗೆ ಹೋಗುವುದು ಯಾವಾಗ?’ ಎಂದು ಮುಗ್ಧವಾಗಿ ಕೇಳುತ್ತಾರೆ. ಎದೆಯ ಮೇಲೆ ಯಾವುದೇ ಶಸ್ತ್ರಚಿಕಿತ್ಸೆಯ ಗುರುತೂ ಇಲ್ಲದಂತೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಹೊರಡಲುನುವಾಗುವಾಗ ಆ ಮಕ್ಕಳ ಮತ್ತು ಪೋಷಕರ ಮುಖದ ಮೇಲಿನ ಸಂತಸದ ನಗು ನನ್ನಲ್ಲಿ ಸಾರ್ಥಕ್ಯದ ಭಾವನೆ ಮೂಡಿಸುತ್ತದೆ.

◆ **ಈ ಸರ್ಜರಿಯಿಂದ ಹೆಣ್ಣುಮಕ್ಕಳಿಗೆ ಮುಜುಗರ ದೂರವಾಗುತ್ತದೆ ಎಂದಿರಿ. ಅದು ಹೇಗೆ?**

ಈ ಸರ್ಜರಿಯಲ್ಲಿ ಕಂಕುಳದ ಕೆಳಗಡೆ ಎರಡು ಇಂಚಿನ ಪುಟ್ಟ ಒಂದು ಗುರುತು ಬಿಟ್ಟರೆ ಎದೆಯ ಮೇಲೆ ಬೇರೆ ಯಾವ ರೀತಿಯ ಗಾಯದ ಗುರುತೂ (Scar) ಇರುವುದಿಲ್ಲ. ಈ ಗುರುತು ಕೈಯನ್ನು ಮೇಲೆತ್ತಿದರೆ ಮಾತ್ರ ಕಾಣುತ್ತದೆ. ಅಲ್ಲದೆ ಇದು ಹೆಣ್ಣುಮಕ್ಕಳ ಸ್ತನದ ಬೆಳವಣಿಗೆಯಲ್ಲಿ ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ. ಹಾಗಾಗಿ ಮಕ್ಕಳಿಗೆ ಈ ಶಸ್ತ್ರಚಿಕಿತ್ಸೆ ಸೌಂದರ್ಯದ ದೃಷ್ಟಿಯಿಂದ ಉತ್ತಮ. ■